ನಡುರಾತ್ರಿ ಸಮೀಪಿಸುತ್ತಿದೆ. ಸಾವಿತ್ರಿಯ ಮನಸ್ಸು ಅಸ್ವಸ್ಥಗೊಳ್ಳುತ್ತಲೇ ಇದೆ. ಎಷ್ಟೇ ಪ್ರಯತ್ನ ಪಟ್ಟರೂ, ನಿದ್ದೆ ಹತ್ತಿರ ಸುಳಿಯದೆ ಅವಳ ಕಣ್ಣಿನ ರೆಪ್ಪೆಗಳು ತೆರೆದುಕೊಂಡೇ ಇವೆ. ಪದೇಪದೇ ಮಗ್ಗುಲು ಬದಲಾಯಿಸಿ ಆಕೆಗೆ ಬೇಜಾರಾಯಿತು. ಅವಳು ಮಂಚದಿಂದ ಎದ್ದು ಕಿಟಕಿಯ ಬಳಿ ಹೋದಳು. ತೆರೆದಿರುವ ಕಿಟಕಿಯಿಂದ ಹೊರಗೆ ದೃಷ್ಟಿ ಹಾಯಿಸಿದಳು.

ಎಲ್ಲೆಡೆ ಕವಿದ ಗಾಢಾಂಧಕಾರ. ಕಣ್ಣಿಗೆ ಏನೂ ಗೋಚರಿಸುತ್ತಿಲ್ಲ. ಶಿಶಿರದ ಕೃಷ್ಣಪಕ್ಷದ ದಿನವಾಗಿದ್ದರಿಂದ ಮೈನಡುಗಿಸುವ ಚಳಿಯ ವಾತಾವರಣವಿತ್ತು. ಯಾವುದೇ ಚಲನೆ, ಮಾತುಕತೆ, ಅಳುವಿಲ್ಲದ ಮಸಣದ ಶಾಂತತೆಯನ್ನು ಹೊದ್ದುಕೊಂಡಿರುವ ಪರಿಸರ. ಸದಾ ಕಿವಿಗೆ ಕೇಳಿಸುತ್ತಿದ್ದ ರಾತ್ರಿಕೀಟಗಳ ಕಿರುಚಾಟ, ನಾಯಿಗಳ ಊಳಿಡುವಿಕೆಯೂ ಇಂದು ಇಲ್ಲ. ಅವು ಬಾಯಿಗೆ ಬಿರಡೆ ಹಾಕಿ ಕುಳಿತಿರಬಹುದೇ.

ಮೌನ ತುಂಬಿದ ಈ ವಾತಾವರಣ ಸಾವಿತ್ರಿಯ ಎದೆಯಲ್ಲಿ ಆತಂಕವನ್ನು ಮೂಡಿಸಿತು. ಆಕೆ ಥಟ್ಟನೆ ಕಿಟಕಿಯ ಬಾಗಿಲು ಮುಚ್ಚಿ ಮಂಚದ ಬಳಿ ಬಂದು ಕುಳಿತಳು. ಅವಳ ಗಮನ ಪಕ್ಕದ ಕೋಣೆಯ ಕಡೆಗೆ ಹರಿಯಿತು. ಸ್ವಲ್ಪ ಹೊತ್ತಿನ ಮೊದಲು ಆ ಕೋಣೆಯಿಂದ ಅಲಮಾರಿಯನ್ನು ತೆರೆದು ಮುಚ್ಚುವ ಸದ್ದು ಮತ್ತು ಪಿಸುಮಾತುಗಳು ಕೇಳಿಬರುತ್ತಿದ್ದವು. ಈಗ ಅವೂ ನಿಂತು ಹೋಗಿವೆ. ಹೊರಗಿನ ವಾತಾವರಣದ ಹಾಗೆ ಆ ಕೋಣೆಯೂ ನಿಶ್ಶಬ್ದವಾಗಿದೆ. ಸಾವಿತ್ರಿ ನಿಟ್ಟುಸಿರು ಬಿಟ್ಟಳು. ಅವಳ ಎದೆಯೊಳಗಿನ ತಾಕಲಾಟ ಇನ್ನೂ ಹೆಚ್ಚಾಯಿತು. ಭವಿಷ್ಯದ ಚಿಂತೆಯಲ್ಲಿ ಅವಳು ಆತಂಕಕ್ಕೀಡಾದಳು.

ಕೋಣೆಯೊಳಗೆ ಹರಡಿಕೊಂಡಿರುವ ಮಂದಬೆಳಕಿನಲ್ಲಿ ಅವಳು ಪಕ್ಕದ ಮಂಚದ ಕಡೆಗೆ ದೃಷ್ಟಿ ಹಾಯಿಸಿದಳು. ಅಲ್ಲಿ ಭಾವೂ ಎರಡೂ ಕಾಲುಗಳನ್ನು ಮೇಲೆಳೆದು ಹೊಟ್ಟೆಯ ಬಳಿ ಮಡಚಿಕೊಂಡು ಚಿಕ್ಕಮಗುವಿನ ಹಾಗೆ ಮಲಗಿದ್ದಾರೆ. ಬಲಗೈಯ ಬೆರಳನ್ನು ಬಾಯಿಯಲ್ಲಿಟ್ಟು ಆಗಾಗ ಅದನ್ನು ಚೀಪುತ್ತಿದ್ದಾರೆ. ಅವರ ಗಲ್ಲ ಎಂಜಲಿನಿಂದ ಒದ್ದೆಯಾಗಿದೆ. ಅವರು ತೊಟ್ಟಿರುವ ಉಡುಪು ಅಸ್ತವ್ಯಸ್ತವಾಗಿದೆ. ಹೊದ್ದುಕೊಂಡಿರುವ ದುಪ್ಪಟ್ಟಿ ಜಾರಿ ನೆಲದ ಮೇಲೆ ಬಿದ್ದಿದೆ. ಚಳಿಗೆ ಅವರು ಇನ್ನಷ್ಟು ಮುದುಡಿಕೊಳ್ಳುತ್ತಿರುವಂತೆ ಕಾಣುತ್ತಿದೆ.

ಸಾವಿತ್ರಿ ಎದ್ದು ಆ ಮಂಚದ ಬಳಿ ಹೋದಳು. ಅವರ ಉಡುಪನ್ನು ಮೇಲೆಳೆದು ಸರಿಪಡಿಸಿದಳು. ಕೆಳಗೆ ಬಿದ್ದಿದ್ದ ದುಪ್ಪಟ್ಟಿಯನ್ನು ಹೆಕ್ಕಿಕೊಂಡು ಮತ್ತೆ ಅವರಿಗೆ ಹೊದಿಸಿದಳು. ಅವರ ಬಾಯಿಯಿಂದ ಹೆಬ್ಬೆಟ್ಟನ್ನು ಹೊರಗೆಳೆದಳು. ಆದರೆ, ಮರುಕ್ಷಣವೇ ಭಾವೂ ಮತ್ತೆ ಅದನ್ನು ಬಾಯಿಯೊಳಗಿಟ್ಟು ತುಟಿ ಬಿಗಿದುಕೊಂಡರು. ಆಮೇಲೆ ಅವಳಿಗೆ ಅದನ್ನು ಹೊರಗೆಳೆಯಲು ಸಾಧ್ಯವಾಗಲೇ ಇಲ್ಲ. ಎಪ್ಪತ್ತನ್ನು ಸಮೀಪಿಸುತ್ತಿರುವ ಭಾವೂವಿನ ದೇಹದ ಶಕ್ತಿ ಇನ್ನೂ ಕುಂದಿಲ್ಲ. ಆದರೆ, ವಯಸ್ಸಿನಲ್ಲಿ ಅವರಿಗಿಂತ ಆರು ವರ್ಷ ಕಿರಿಯಳಾಗಿರುವ ಸಾವಿತ್ರಿ ಮಾತ್ರ ಕಾಣಲು ಭಾವೂ ಅಕ್ಕನ ಹಾಗಿದ್ದಾಳೆ. ಮೊದಲೇ ಅವಳದು ಕೃಶ ದೇಹ. ಈಗಂತೂ ಅವಳು ಸೊರಗಿ ಕಡ್ಡಿಯ ಹಾಗಾಗಿದ್ದಾಳೆ.

ಭಾವೂ ಕೆನ್ನೆಯನ್ನು ಒರೆಸಬೇಕು, ಅವರನ್ನು ಬಚ್ಚಲಿಗೆ ಕರೆದುಕೊಂಡು ಹೋಗಬೇಕು, ಇಲ್ಲದಿದ್ದರೆ ಅವರು ಹಾಸಿಗೆಯನ್ನು ಒದ್ದೆ ಮಾಡಿ ಬಿಡಬಹುದು ಎಂದೆಲ್ಲ ಅವಳಿಗೆ ಅನಿಸುತ್ತಿದ್ದರೂ ಯಾಕೋ ಮಲಗಿದ್ದಲ್ಲಿಂದ ಏಳುವುದಕ್ಕೆ ಅವಳ ಮನಸ್ಸು ಒಪ್ಪಲಿಲ್ಲ.

ದೇವರೇ, ಮುಂದೆ ಏನು ಮಾಡಲಿ? ಈ ಮನುಷ್ಯನನ್ನು ಸಂಭಾಳಿಸುವುದು ತನ್ನಿಂದ ಸಾಧ್ಯವಾಗುವುದೇ? ಈ ಮತಿಭ್ರಾಂತ ವ್ಯಕ್ತಿಯನ್ನು ನಾನು ಒಬ್ಬಾಕೆಯೇ ನೋಡಿಕೊಳ್ಳುವುದಾದರೂ ಹೇಗೆ? ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವುದು ಸುಲಭವಲ್ಲ. ಕಣ್ಣು ತಪ್ಪಿಸಿ ಯಾವಾಗ ಎಲ್ಲಿ ಹೋಗುತ್ತಾರೆಂದು ಹೇಳಲು ಸಾಧ್ಯವಿಲ್ಲ. ಅವರಲ್ಲಿ ಭರವಸೆ ಇಟ್ಟುಕೊಳ್ಳುವ ಹಾಗಿಲ್ಲ. ಅದರಲ್ಲಿಯೂ ಈ ಮನುಷ್ಯ ದೇಹದಲ್ಲಿ ಗಟ್ಟಿಮುಟ್ಟಾಗಿದ್ದಾರೆ. ಅವರು ಕೈ ಜಾಡಿಸಿದರೇ ನಾನು ಸೋತು ಸುಸ್ತಾಗಿಬಿಡುತ್ತೇನೆ. ಹೀಗಿರುವಾಗ ಇವರನ್ನು ತಡೆದು ನಿಲ್ಲಿಸುವುದು ನನ್ನಿಂದ ಸಾಧ್ಯವಾಗಬಹುದೇ.